# ಪ್ರಕಟಣೆ

## ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ದ್ವಿತಳಿ ರೇಷ್ಮೆಗೂಡಿನ ಉತ್ಪಾದನೆಗೆ ಕ್ಲಸ್ಟರ್ ವ್ಯಾಪ್ತಿಯಲ್ಲಿ ದ್ವಿತಳಿ ಸಾಕಾಣಿಕೆಯಲ್ಲಿ ತಾಂತ್ರಿಕತೆಯ ಬಲವರ್ಧನೆಗಾಗಿ ಪ್ರಾತ್ಯಕ್ಷತೆ ಸಹಿತ ಪ್ರಗತಿಪರ ಯಶಸ್ವಿ ದ್ವಿತಳಿ ರೈತರಿಂದ ಸ್ಥಳೀಯ ತರಬೇತಿ ಕಾರ್ಯಕ್ರಮ(Farmer to Farmer Training)

ಭಾರತ ದೇಶದ ರೇಷ್ಮೆ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿರುವ ಕರ್ನಾಟಕವು 2014-15ನೇ ಸಾಲಿನಲ್ಲಿ 10,000 ಮೆಟ್ರಿಕ್ ಟನ್ ರೇಷ್ಮೆ ಉತ್ಪಾದಿಸುವ ಗುರಿಯನ್ನು ಹೊಂದಿದ್ದು, ಅದರಲ್ಲಿ 1500 ಮೆಟ್ರಿಕ್ ಟನ್ ದ್ವಿತಳಿಯಾಗಿರುತ್ತದೆ. ಈ ಗುರಿಯ ಸಾಧನೆಗಾಗಿ ರಾಜ್ಯದಲ್ಲಿ 46 ಕ್ಲಸ್ಟರ್ ಪ್ರದೇಶವನ್ನು ಗುರುತಿಸಿ, ಪ್ರತಿ ಕ್ಲಸ್ಟರ್‌ಗೆ ಇಲಾಖೆಯಿಂದ ಕ್ಲಸ್ಟರ್ ನೋಡಲ್ ಅಧಿಕಾರಿ ಮತ್ತು ಕೇಂದ್ರ ರೇಷ್ಮೆ ಮಂಡಳಿಯವರಿಂದ ಕ್ಲಸ್ಟರ್ ಅಭಿವೃದ್ಧಿ facilitator ರನ್ನು ನೇಮಕಾತಿ ಮಾಡಿದೆ. ರೇಷ್ಮೆ ಕೃಷಿಕರ ಮಟ್ಟದಲ್ಲಿ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ಹಿಪ್ಪುನೇರಳೆ ಬೇಸಾಯ ಹಾಗೂ ರೇಷ್ಮೆ ಹುಳು ಸಾಕಾಣಿಕೆಯ ವಿವಿಧ ಚಟುವಟಿಕೆಗಳಿಗೆ ಪ್ರೋತ್ಸಾಹಧನ, ಸಹಾಯಧನ ಹಾಗೂ ಸೌಲಭ್ಯವನ್ನು ಕಲ್ಪಿಸಿದೆ. ಇದರ ಜೊತೆಗೆ ಸಂಶೋಧನಾ ಕೇಂದ್ರದವರು ಹೊರತಂದಿರುವ ತಾಂತ್ರಿಕತೆಗಳ ಅರಿವು ರೈತರಿಗೆ ಮುಟ್ಟಿಸುವ ಕಾರ್ಯಕ್ರಮವು ನಿರಂತರವಾಗಿ ತರಬೇತಿ, ಪ್ರಾತ್ಯಕ್ಷತೆ ಹಾಗೂ ಕಾರ್ಯಾಗಾರಗಳ ಮುಖಾಂತರ ನಡೆಯುತ್ತಾ ಬಂದಿದೆ. 2014-15ನೇ ಸಾಲಿನಲ್ಲಿ ರೈತರಿಗೆ ತಾಂತ್ರಿಕತೆಯ ಬಲವರ್ಧನೆಗಾಗಿ ಪ್ರತಿ ತಿಂಗಳೂ ಪ್ರತಿ ಕ್ಲಸ್ಟರ್‌ನಲ್ಲಿ ಎರಡು ತಾಂತ್ರಿಕ ವಿಷಯಗಳ ಮೇಲೆ ತಾಂತ್ರಿಕತೆಯ ಬಲವರ್ಧನೆಗಾಗಿ ಮತ್ತು ಪ್ರಾತ್ಯಕ್ಷತೆಯನ್ನು ಅಕ್ಟೋಬರ್-2014 ರಿಂದ ಜನವರಿ-2015 ರವರೆಗೆ 184 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾವಾರು ಕ್ಲಸ್ಟರ್ ಪ್ರದೇಶದಲ್ಲಿ ಅಕ್ಟೋಬರ್-2014ರ ಮಾಹೆಯಲ್ಲಿ ನಡೆಯಲಿರುವ ಸ್ಥಳೀಯ ತರಬೇತಿ ಕಾರ್ಯಕ್ರಮದ (Farmer to Farmer Training) ದಿನಾಂಕಗಳನ್ನು ಕೆಳಕಂಡಂತೆ ನಿಗಧಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆ | ಕ್ಲಸ್ಟರ್ | Farmer to Farmer ತರಬೇತಿ ಆಯೋಜಿಸಲು ಗುರುತಿಸಿರುವ . ಕ್ಲಸ್ಟರ್ ನೋಡಲ್ ಅಧಿಕಾರಿ (ಜವಬ್ದಾರಿ ತೆಗೆದುಕೊಳ್ಳಬೇಕಾದ ಅಧಿಕಾರಿ) | ಪ್ರಾತ್ಯಕ್ಷತೆ ಸಹಿತ ತರಬೇತಿ ಕಾರ್ಯಕ್ರಮ ನಡೆಯುವ ಸ್ಥಳ | ದಿನಾಂಕ |
|---|---|---|---|---|---|
| 1 | ಕೋಲಾರ | 1)ಶಹಪೂರ<br>2)ಐತಾಂಡಹಳ್ಳಿ<br>3)ಯಲ್ದೂರು<br>4)ಟೇಕಲ್<br>5)ಕುರುಡಮಲೈ | ಬಿ.ಎಲ್.ಕೃಷ್ಣಪ್ಪ<br>ಸಿ.ಡಿ.ಬಸವರಾಜು<br>ಎಂ.ನಾಗರಾಜು<br>ಮಂಜುನಾಥ್(SEO (i/c))<br>ಎಂ.ವೆಂಕಟೇಶ್ | ಕೋಲಾರ<br>ಕುಪ್ಪನಹಳ್ಳಿ<br>ಯಲ್ದೂರು<br>ಮಾಲೂರು<br>ಬೇವಳ್ಳಿ | 25/10/2014<br>30/10/2014<br>28/10/2014<br>27/10/2014<br>29/10/2014 |
| 2 | ಚಿಕ್ಕಬಳ್ಳಾಪುರ | 6)ಗೌರಿಬಿದನೂರು<br>7)ಅಂದಾರ್ಲಹಳ್ಳಿ<br>8)ಶಿಡ್ಲಘಟ್ಟ | ಅಂಜನಾಮೂರ್ತಿ<br>ಅನಿಲ್‌ಪೀರ್ ನಾಯಕ್<br>ಎಂ.ಸಿ.ಚಂದ್ರಪ್ಪ | ಕೋಡಿಹಳ್ಳಿ<br>ತಮ್ಮನಾಯಕನಹಳ್ಳಿ<br>ಶಿಡ್ಲಘಟ್ಟ | 25/10/2014<br>29/10/2014<br>27/10/2014 |
| 3 | ತುಮಕೂರು | 9)ತುಮಕೂರು<br>10)ವೈ.ಎನ್.ಹೊಸಕೋಟೆ<br>11)ಶಿರಾ | ವೈ.ಟಿ.ಬಾಲಕೃಷ್ಣಪ್ಪ<br>ಜೆ.ಎಂ.ಮುನ್ನಿಬಸಯ್ಯ<br>ಜಿ.ಎಂ.ವಿಶ್ವನಾಥ್ | ಮುದ್ದೇನಹಳ್ಳಿ<br>ಲಿಂಗದಹಳ್ಳಿ<br>ಯಡಮಡುಕು | 29/10/2014<br>28/10/2014<br>27/10/2014 |
| 4 | ರಾಮನಗರ | 12)ಬನ್ನಿಕುಪ್ಪೆ<br>13)ಕನಕಪುರ<br>14)ಬೇವೂರು | ಪಿ.ಅಪ್ಸರ್ ಬಾಬು<br>ಮಹೇಂದ್ರಕುಮಾರ್<br>ಎಂ.ಟಿ.ಆಲೂರೇಗೌಡ | ಬನ್ನಿಕುಪ್ಪೆ<br>ಕನಕಪುರ<br>ಬೇವೂರು | 28/10/2014<br>27/10/2014<br>30/10/2014 |